Change of Headquarters of the Assistant Director of Sericulture from Sidlaghatta to Kolar.

*Q.—445. Sri J. VENKATAPPA (Sidlaghatta).—

Will the Government be pleased to state :—

whether it is a fact that the Headquarters of the Assistant Director of Sericulture is changed from Sidlaghatta to Kolar and if so, the reasons for such change ?

A.—Sri H. C. LINGA REDDY (Deputy Minister for Planning and Development).—

Yes.

Reasons :—

(i) Apart from being the District Headquarters, Kolar has a bigger farm and larger area when compared to Sidlaghatta farm.

(ii) The area under mulberry attached to the farm and the buildings are much larger in Kolar.

(iii) It is found economical as the services of Sericulture Assistant at Kolar has been withdrawn and utilised for the Foreign Race Seed Cocoon Farm at Lalagondahalli.

BUDGET ESTIMATES FOR 1960-61—GENERAL DISCUSSION

(Debate continued)

Mr. SPEAKER.—Sri P. G. Sidhanti.

ಶ್ರೀ ಎಚ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಅಧ್ಯಕ್ಷರೇ.....

ಅಧ್ಯಕ್ಷರು.—ನಾನು, ಶ್ರೀ ಸಿದ್ಧಾಂತಿಯವರನ್ನು ಕರೆದಿದ್ದೇನೆ, ನಿಮ್ಮ ಟರ್ನ್ ಬರುತ್ತದೆ, ಕುಳಿತುಕೊಳ್ಳಿ.

ಶ್ರೀ ಎಚ್. ಜಿ. ನರಸಿಂಹೇಗೌಡ. ನಮಗೆ ಮೊದಲೇ ತಿಳಿಸಬೇಕಾಗಿತ್ತು.

Mr. SPEAKER.—There is no previous intimation to me. Please take your seat.

ಶ್ರೀ ಎಚ್. ಜಿ. ನರಸಿಂಹೇಗೌಡ.—ನಾನು ಒಂದು ವಿಷಯ ತಿಳಿಸಬೇಕಾಗಿದೆ.

Mr. SPEAKER.—No point can be raised without my previous permission.

ಶ್ರೀ ಎಚ್. ಜಿ. ನರಸಿಂಹೇಗೌಡ.—ನನಗೆ ಹೇಳಲು ಅವಕಾಶವಿದೆ.

Mr. SPEAKER.—I cannot allow it. Please take your seat. I have already explained the position yesterday.

ಶ್ರೀ ಎಚ್. ಜಿ. ನರಸಿಂಹೇಗೌಡ.—ಪಿ. ಎಸ್. ಪಿ. ಯವರು ಕಳುಹಿಸಿರುವ ಲಸ್ಟ್ ಫಾರೋ ಮಾಡಿದ್ದೀರಾ !

ಅಧ್ಯಕ್ಷರು.—ನಾನು ನಿನ್ನೆಯೇ ವಿವರಿಸಿ ಹೇಳಿದ್ದೇನೆ. ಕಾಲ ನಿಗದಿಮಾಡಬಾರದೆಂಬ ಅಭಿಪ್ರಾಯಬಂದ ಮೇರೆ ನಿಗದಿ ಮಾಡದೆ ತೀವ್ರವಾಗಿ ಮುಗಿಸಬೇಕೆಂದು ಸದಸ್ಯರಿಗೆ ಸೂಚಿಸುತ್ತಿದ್ದೇನೆ.

ಆದುದರಿಂದ ನಾನು ನಿನ್ನೆಯೇ ಹೇಳಿದೆ. ಅದನ್ನು ನೋಡಿದರೆ ಎಷ್ಟೆಷ್ಟು ಕಾಲ ಕೊಟ್ಟಿದೆ ಎನ್ನುವುದು ಕಾಣುತ್ತದೆ. 6 ಗಂಟೆ 8 ನಿಮಿಷ ಪಿ. ಎಸ್. ಪಿ.ಯವರಿಗೆ, 6 ಗಂಟೆ 47ನಿ. ಕಾಂಗ್ರೆಸ್ಸಿನವರಿಗೆ, 2 ಗಂ. 57ನಿ. ಇತರ ಅಪೊಸಿಷ್ಷನ್ ಮೆಂಬರುಗಳಿಗೆ ಕೊಟ್ಟಿದ್ದೇನೆ. ಎಂದರೆ, ಪಿ. ಎಸ್. ಪಿ. ಮತ್ತಿತರ ಅಪೊಸಿಷ್ಷನ್ ಮೆಂಬರುಗಳಿಗೆ 9 ಗಂಟೆ 5 ನಿಮಿಷ ಕೊಟ್ಟಿದ್ದೇನೆ ಮತ್ತು ಕಾಂಗ್ರೆಸ್ಸಿಗೆ 6 ಗಂಟೆ 47 ನಿಮಿಷ ಕೊಟ್ಟಿದ್ದೇನೆ. ಇದು ಅನ್‌ಫೇರ್ ಎಂದು ಯಾರಾದರೂ ಹೇಳಿದರೆ ನನಗೆ ದೇವರೇ ಸಹಾಯ ಮಾಡಬೇಕು. ನಾನು ಇನ್ನೇನು ಹೇಳುವುದು ? (Addressing Sri N. G. Narasimhe Gowda) You are likely to get a chance. ನಿನ್ನೆ ಕೂಡ ಹೇಳಿದ್ದೇನೆ. ಏತಕೆ ಇದನ್ನೆಲ್ಲಾ ಮಾಡುತ್ತಿದ್ದೀರಿ ?

ಶ್ರೀ ಎಚ್. ಜಿ. ನರಸಿಂಹೇಗೌಡ.—ಏನೇನೋ ಹೇಳುತ್ತಿದ್ದೀರಿ. ಸಭೆಯಲ್ಲಿ ಯಾವ ಮಾತನ್ನು ಒಪ್ಪಿಕೊಂಡಿದ್ದೀರೋ ಅದನ್ನು ನಡೆಸಿ. ಟೈಂ ಲಿಮಿಟ್ ಇಟ್ಟರೆ, ನನ್ನ ಮೇಲೆ ಹಾಕುತ್ತೀರಿ.

ಅಧ್ಯಕ್ಷರು.—ನಿನ್ನೆ ರೂಲಿಂಗ್ ಪ್ರಕಾರ ಟೈಮ್ ಲಿಮಿಟ್ ಹಾಕುತ್ತೇನೆ. 15 ನಿಮಿಷ ಲಿಮಿಟ್ ಹಾಕಿದರೆ ಎಲ್ಲರಿಗೂ ಅವಕಾಶ ಸಿಕ್ಕುತ್ತದೆಂದು ಹೇಳಿದರೆ ಆ ರೀತಿ ಅವರೆಲ್ಲ ಮಾಡಲಿಲ್ಲ.

ಶ್ರೀ ಎಚ್. ಜಿ. ನರಸಿಂಹೇಗೌಡ.—15 ನಿಮಿಷ ಕೊಟ್ಟದ್ದಪಕ್ಷದಲ್ಲಿ ವಿರೋಧಪಕ್ಷದವರು 7-8 ಜನ ಹೆಚ್ಚಾಗಿ ಮಾತನಾಡುವುದಕ್ಕೆ ಅವಕಾಶವಿತ್ತು. ತಮ್ಮ ರೂಲಿಂಗ್ ತಾವೇ ಬ್ರೇಕ್ ಮಾಡಿದ್ದೀರಿ.

ಅಧ್ಯಕ್ಷರು.—ಹೀಗೆ ಮಾತನಾಡುವುದು ಸರಿಯಲ್ಲ. ಏಕೋ ನ್ಯೂಸ್ ರಫರ್ ಆಗಿದ್ದೀರಿ. ಆದರೆ ನಾನು ಮೊದಲೇ ಹೇಳಿದ್ದೆ. 15 ನಿಮಿಷ ಟೈಂ ಲಿಮಿಟ್ ಹಾಕುವ ವಿಚಾರ ಇದೆಯೆಂದು ಮೊದಲನಿಂದಲೂ ಹೇಳುತ್ತಾ ಬಂದಿದ್ದೇನೆ. Half-an-hour ಹೇಳಿದ್ದೇನೆ, 15 ನಿಮಿಷ ಹೇಳಿದ್ದೇನೆ. "I am not going to put any time limit ; it is only a suggestion that the members should finish speeches as early as possible within half an-hour" ಎಂದು ಮೊದಲನಿಂದಲೂ ಹೇಳಿದ್ದೇನೆ. ಒಮ್ಮೆ 15 ನಿಮಿಷವೆಂದೂ ಹೇಳಿದ್ದೇನೆ. ನಾನು time limit ಮೊದಲನಿಂದಲೂ ಹಾಕಲ್ಲ. ಈ ಸಭೆ ಬೇಡವೆಂದು ಹೇಳಿರುವುದರಿಂದ ಹಾಕಲ್ಲ.